SRI D. DEVARAJ URS (Chief Minister).

(*a*) The Supreme Court in the General Manager, Southern Railways-*vs*.Rangachari has upheld reservations in favour of backward classes of citizens in posts filled by promotion by selection.

(*b*) This matter is under the consideration of Government.

ಶ್ರೀ ಎಂ. ಎಚ್ ಜಯಪ್ರಕಾಶ್ ನಾರಾಯಣ್ — ಸ್ವಾಮಿ ತಾವು ಮುಖ್ಯಮಂತ್ರಿಗಳಾದಮೇಲೆ ೨-೩ ಸಾರಿ ಪ್ರಶ್ನೆ ಕೇಳಿದಾಗ ಅದನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೀರಿ. ಇದು ಬಹಳ ತಡವಾಗಿರುತ್ತದೆ. ಜಾಗ್ರತೆ ಮಾಡುತ್ತೀರಾ ಸ್ವಾಮಿ ?

† ಶ್ರೀ ಡಿ. ದೇವರಾಜ ಅರಸ್.—ಈಗಲೂ ಕೂಡ ಅದೇ ಹೇಳುತ್ತಾ ಇದ್ದೇನೆ. ಇದು ಸ್ವಲ್ಪ ಕಠಿಣವಾದ ಸಮಸ್ಯೆಯಾಗಿರುತ್ತದೆ. ಆದುದರಿಂದ ಇದು ತಡವಾಗುವುದಕ್ಕೆ ಕಾರಣವಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದು ಕಠಿಣವಾದ ಪ್ರಶ್ನೆಯಾದರೂ ತಾವು ಇದನ್ನು ಬಿಡಿಸಲು ಶಕ್ತಿಯುತರಾಗಿದ್ದೀರಿ. ಬೇರೆಬೇರೆ ಕಡೆಗಳಲ್ಲಿ ಆಂದರೆ ಪ್ರೈವಿನಿಸ್ಟರು ಸೆಕ್ರೆಟರಿಯೇಟ್‌ನಲ್ಲೂ ಕೂಡ ಇದನ್ನು ಜಾರಿಗೆ ತಂದಿದ್ದಾರೆ. ಪ್ರೈಮಿನಿಸ್ಟರ್ ಮಾಡಿರತಕ್ಕಂಥದ್ದನ್ನು ತಮ್ಮ ಕಾಲದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI D. DEVARAJ URS.—I will do my best.

ಶ್ರೀ ಜೆ. ಎಲ್, ಕಬಾಡಿ. —ಬುದಿರುವ ತೊಡಕಾದರೂ ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ತೊಡಕೇನು ಎನ್ನುವುದನ್ನು ಹೇಳಬೇಕಾದ್ದು ಇಲ್ಲ. I will try my best.

ಶ್ರೀ ಎಂ. ಬಿ. ರಾಮಸ್ವಾಮಿ.—ರಂಗಾಚಾರಿ ಕೇಸ್‌ನಲ್ಲಿ ಸ್ಪಷ್ಟವಾಗಿ ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಇದನ್ನು ಜಾರಿಗೆ ಕೊಟ್ಟಿರುತ್ತಾರೆ. ಹರಿಜನರು ತಮ್ಮಲ್ಲಿ ವಿಶೇಷವಾದ ವಿಶ್ವಾಸವನ್ನು ಇಟ್ಟುಕೊಂಡಿರುತ್ತಾರೆ. ತಾವು ಈ ಕೆಲಸವನ್ನು ಮಾಡಿ, ಇಡಿ ನಮ್ಮ ಭರತ ಖಂಡದಲ್ಲಿ ಮಾನವ ಮಂತ್ರಿಗಳಾಗಬೇಕೆಂದು ಆಶಯವನ್ನಿಟ್ಟುಕೊಂಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ರಿಸರ್ವೇಷನ್ ಮಾಡಬೇಕೆನ್ನುವುದು ಪ್ರಶ್ನೆ ಇರುತ್ತದೆ. ಆದರ ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸಿಗೂ ರಿಸರ್ವೇಷನ್ ಮಾಡಬೇಕೆನ್ನುವುದು ಮತ್ತೊಂದು ಪ್ರಶ್ನೆ ಇರುತ್ತದೆ. ಕೇರಳ ಮುಂತಾದ ಕೆಲವು ಕಡೆಗಳಲ್ಲಿ ಮಾಡಿರುತ್ತಾರೆ. ಆದರೆ ಬ್ಯಾಕ್‌ವರ್ಡ್ ಕ್ಲಾಸಿಗೆ ಮಾಡಿಲ್ಲ. ನಮ್ಮಲ್ಲಿ ಎರಡನ್ನೂ ಮಾಡಬೇಕೆನ್ನುವುದು ಪ್ರಶ್ನೆಯಾಗಿರುತ್ತದೆ. ಅದಕ್ಕೆ ಸ್ವಲ ಸಮಸ್ಯೆಯು ಕಠಿಣವಾಗಿದೆ ಎಂದು ಹೇಳುವುದು. ಇದನ್ನು ಇನ್ನೂ ವಿಚಾರ ಮಾಡಬೇಕಾಗಿರುತ್ತದೆ. ಮಾತೆತ್ತಿದರೆ ನಿಮ್ಮ ಕಾಲದಲ್ಲಿ ನಮ್ಮ ಕಾಲದಲ್ಲಿ ಎಂದು ಹೇಳುತ್ತಿದ್ದೀರಿ. ಇನ್ನೊಂದು ಕಾಲ ಬಂದರೆ ಏನಾಗುತ್ತದೋ ನನಗೂ ಗೊತಿಲ್ಲ. ಇದನ್ನು ನನ್ನ ಕಾಲದಲ್ಲಿ ಮಾಡಲು ಪ್ರಯತ್ನ ಪಡುತ್ತೇನೆ.

ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯ ಮುಖ್ಯೋಪಾಧ್ಯಾಯರ ವೇತನ ಶ್ರೇಣಿ

೭೪೮. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕು ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಶ್ರೀ ಎಸ್. ಎಂ. ಜೋಶಿ ಬಿ.ಎ ,ಬಿ.ಎಡ್. ಅಗಿ ೧೯೬೯ ರಿಂದ ಹೆಡ್ ಮಾಸ್ತರರಾಗಿ ಕೆಲಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಆ) ಇಂತಹವರು ಎಷ್ಟು ಜನ ಹೆಡ್ ಮಾಸ್ಟರರು ೧೯೬೦ ರ ಬಿ.ಎ.,ಬಿ.ಎಡ್. ಸ್ಕೇಲು ದೊರೆಯದೆ ಎಸ್.ಎಸ್.ಎಲ್.ಸಿ. ಸ್ಕೇಲು ಪಡೆದು ಕೆಲಸ ಮಾಡುತ್ತಿರುವರು ;

(ಇ) ಅವರಿಗಿಂತ ಜೂನಿಯರ್ಸ್‌ಗೆ ಬಡ್ತಿ ನೀಡಿರುವುದು ಅವರಿಗೆ ಬಿ.ಎ.,ಬಿ.ಎಡ್. ಪಗಾರ ದೊರೆಯದಿರುವುದು ನಿಜವಲ್ಲವೆ ;

(ಈ) ಈ ವಿಷಯದಲ್ಲಿ ಸರ್ಕಾರ ಆಸಕ್ತಿ ವಹಿಸಿ ಇಂತಹವರಿಗೆ ತ್ವರಿತ ಅವರಿಗೆ ದೊರೆಯುಬೇಕಾದ ಸ್ಕೇಲು ಮತ್ತಿತರ ಸೌಲಭ್ಯಗಳನ್ನು ಸರ್ಕಾರ ಕೊಡುವುದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು). —

(ಅ) ಬಂದಿದೆ.

(ಆ) ೩೨

(ಇ) ನಿಜವಲ್ಲ.

(ಈ) ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ವಿ. ವಿ. ವಾಯಿ.—ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕು ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಶ್ರೀ ಎಸ್. ಎಂ. ಜೋಶಿಯವರು ೧೯೬೪ ನೇ ಇಸವಿಯಿಂದ ಹೆಡ್ ಮಾಸ್ಟರಾಗಿ ಕೆಲಸ ಮಾಡಿಕೊಂಡಿರುತ್ತಾರೆಂದು ತಿಳಿಸಿದ್ದೀನೆ. ಅವರು ೧೯೬೪ ರಿಂದ ಬಿ.ಎ.,ಬಿ.ಎಡ್. ಮಾಡಿ ಕೊಂಡು ಎಸ್.ಎಸ್.ಎಲ್.ಸಿ ಸ್ಕೇಲ್ ಪಡೆದು ಕೆಲಸಮಾಡುತ್ತಿದ್ದಾರೆ. ಈ ರೀತಿಯಾಗಿ ಕೆಲಸ ಮಾಡುತ್ತಿರುವವರು ಎಷ್ಟು ಜನ ಇದ್ದಾರೆಂದು ಕೇಳಿರುವುದಕ್ಕೆ ೩೨ ಜನರೆಂದು ಉತ್ತರದಲ್ಲಿ ಕೊಟ್ಟಿರುತ್ತೀರಿ: ಅದೇ ಈ ರೀತಿಯಾಗಿ ಎಸ್.ಎಸ್.ಎಲ್.ಸಿ ಸ್ಕೇಲನ್ನು ಪಡೆದು ಕೆಲಸಮಾಡುತ್ತಿರುವವರು ೭೦-೮೦ ಜನರು ಇರುತ್ತಾರೆ. ಆದ್ದರಿಂದ ಇದನ್ನು ಪುನಃ ಪರಿಶೀಲನೆ ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿ. ವಿ. ವಾಯಿ.—ಆ ಪ್ರಶ್ನೆಯ ಬಗ್ಗೆ ಅಸಕ್ತಿ ವಹಿಸಿ ಆದಷ್ಟು ಜಾಗ್ರತೆ ವಿಚಾರಣೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ತೀವ್ರವಾದ ಪರಿಶೀಲನೆಯಲ್ಲಿದೆ ಎಂದು ಈಗಾಗಲೇ ಹೇಳಿದ್ದೇನೆ.

MADAM SPEAKER.—Now Questions are over

QUESTIONS FOR ANSWERS ON THE DAY
(but not taken up)

Acreage of ayacut under T.B. Project in Bellary and Raichur Districts

391. SRI B. SATYANARAYANA SINGH (Hospet).—Will the Ministes of State for Major and Medium Irrigation be pleased to state.—

(*a*) whether the Deputy Commissioner, Bellary is reported to have stated that exact number of acres under Tungabhadra Project was still not available, but vary from one Department of the Government to another;

(*b*) whether the Government intends to take steps to ascertain the exact acres under the T. B. P. ayacut ;